# ನಿಂಬೆ ರಸದ ಮಾರುಕಟ್ಟೆ ಮೆದು ಪಾನೀಯಕ್ಕಿಂತ 2ಪಟ್ಟು ದೊಡ್ಡದು

**ಬೆಂಗಳೂರು :** ಮೆದು ಪಾನೀಯ ಮಾರುಕಟ್ಟೆ ಗಿಂತ ನಿಂಬೆ ರಸದ ಪಾನೀಯ ಮಾರುಕಟ್ಟೆ ಎರಡುಪಟ್ಟು ದೊಡ್ಡದು ಎಂದು ಪೆಪ್ಸಿಕೊ ಇಂಡಿಯಾ ಫ್ಲೇವರ್ಸ್ ಮಾರ್ಕೆಟಿಂಗ್ ವಿಭಾಗದ ಕಾರ್ಯಕಾರಿ ಉಪಾಧ್ಯಕ್ಷೆ ಅಲ್ಪನಾ ಟೈಟಸ್ ತಿಳಿಸಿದ್ದಾರೆ.

ಪೆಪ್ಸಿ ಸಂಸ್ಥೆಯ 'ಪೆಪ್ಸಿಕೊ ನಿಂಬೂಜ್"ಹೊಸ ಉತ್ಪನ್ನವನ್ನು ರಾಜ್ಯದ ಮಾರುಕಟ್ಟೆಗೆ ಪರಿಚಯಿಸುವ ಸಂದರ್ಭದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ನಿಂಬೆಹಣ್ಣಿನ ರಸದ ಮಾರುಕಟ್ಟೆ ಸುಮಾರು 100 ಕೋಟಿ ಕೇಸ್ ಆಗಿದೆ ಎಂದರು.

ಪ್ಯಾಕೇಜ್ಡ್ ಲಘು , ಮೆದು ಪಾನೀಯ, ಜ್ಯೂಸ್, ಮಜ್ಜಿಗೆ ಎಲ್ಲವೂ ಸೇರಿ ಎಲ್ಲ ಪಾನೀಯಗಳ ಮಾರುಕಟ್ಟೆ ಗಾತ್ರ 1000 ಲಕ್ಷ ಕೇಸ್‌ಗಳಾಗಿವೆ. ಅದರಲ್ಲೂ ನಿಂಬೆ ರಸದ ಮಾರುಕಟ್ಟೆ ಎರಡು ಪಟ್ಟಾಗಿದ್ದು ಈ ಉದ್ಯಮಕ್ಕೆ ವಿಪುಲ ಅವಕಾಶವಿದೆ ಎಂದರು.

ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ 'ನಿಂಬೂಜ್ 'ಬಿಡುಗಡೆ ಮಾಡಿ ನಿಂಬೂ ರಸ ಆರೋಗ್ಯಕರ ಪೇಯ ಎಂದು ಹೇಳಿದರು.

ಪೆಪ್ಸಿಕೊ ನಿಂಬೂಜ್ ವಾಪಸ್ ಮಾಡಬಹುದಾದ ಬಾಟಲಿ , ಪೆಟ್ ಬಾಟಲ್ ಹಾಗೂ ಟೆಟ್ರಾ ಪ್ಯಾಕ್‌ನಲ್ಲಿ ಲಭ್ಯವಿದೆ. 200-350 ಎಂಎಲ್‌ಗಳ ಪ್ಯಾಕುಗಳು 10-15 ರೂ.ಗಳಲ್ಲಿ ಲಭ್ಯವಿದೆ. ಬಳಕೆಯ ಅವಧಿ 4 ತಿಂಗಳು. ದೇಶದ ಮೂರು ಪ್ರಮುಖ ಯೂನಿಟ್‌ಗಳಲ್ಲಿ ನಿಂಬೆ ರಸವನ್ನು ಉತ್ಪಾದಿಸಲಾಗುತ್ತಿದೆ ಎಂದು ಅವರು ಹೇಳಿದರು.